O.S 589/2015
PW-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 01-03-2019.**

*ಪಾಟೀ ಸವಾಲು ಶ್ರೀಮತಿ ಸಿ.ಸಿ ವಕೀಲರಿಂದ*

ನಾನು ಮಾದಗುಡ್ಡೇನಹಳ್ಳಿಯಲ್ಲಿ ವಾಸವಾಗಿದ್ದೇನೆ. ಸಮುದ್ರವಳ್ಳಿಗೂ ನಮ್ಮ ಊರಿಗೂ ಸುಮಾರು 12 ಕೀ.ಮೀಟರ್ ಅಂತರವಿದೆ.ನನ್ನ ಅಕ್ಕ ಮತ್ತು ನನ್ನ ಅಕ್ಕನ ಮಕ್ಕಳು ಮೋಸದಿಂದ ಡಿಕ್ರಿ ಪಡೆದಿರುವುದರಿಂದ ಈ ದಾವೆ ಸಲ್ಲಿಸಿದ್ದೇನೆ.ದಾವ ಸ್ವತ್ತನ್ನು ಪ್ರತಿವಾದಿಗಳು ತಮ್ಮ ಹೆಸರಿಗೆ ಮಾಡಿಕೊಂಡಿರುವುದರಿಂದ ಈ ದಾವೆ ಸಲ್ಲಿಸಿದ್ದೇನೆ.ಈ ದಾವೆಯನ್ನು 7 ಸ್ವತ್ತುಗಳಿಗೆ ಸಲ್ಲಿಸಿದ್ದೇನೆ.

ದಾವ ಸ್ವತ್ತು ನನ್ನ ಅಜ್ಜಿ ದ್ಯಾವಮ್ಮರವರರಿಗೆ ಸೇರಿದ ಸ್ವತ್ತು ಎಂದರೆ ಸರಿ.ಸದರಿ ದ್ಯಾವಮ್ಮರವರಿಗೆ ಸದರಿ ಸ್ವತ್ತು ಕ್ರಯದ ಮೂಲಕ ಬಂದಿರುತ್ತದೆಸುಮಾರು 50 ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿದ್ದಾರೆ

ನನ್ನ ತಾಯಿ ನಂಜಮ್ಮನಿಗೆ ನಾವು 5 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಮೊದಲನೇಯವರು ರಂಗಮ್ಮ, ಎರಡನೇಯವರು ಶಿವಮ್ಮ, ಮೂರನೇಯವರು ಪಾರ್ವತಮ್ಮ, ನಿಲಮ್ಮಮತ್ತು ನಾನು.ನನ್ನ ತಾಯಿಗೆ ದಾವ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತು ಇಲ್ಲ ಅದರೆ ನನ್ನ ತಂದೆಗೆ ನಮ್ಮ ಕುಟುಂಬಕ್ಕೆ ಸೇರಿದ ಇತರೇ ಸ್ವತ್ತುಗಳು ಇವೆ.ಅವುಗಳ ಸರ್ವೆ ನಂಬರ್ ನೆನಪಿಲ್ಲ.ಸದರಿ ಉಳಿಕೆ ಸ್ವತ್ತುಗಳಲ್ಲಿ ಯಾರು ಎಷ್ಟೆಷ್ಟು ವಿಸ್ತೀರ್ಣದಲ್ಲಿ ಹಾಗೂ ಯಾವ ಯಾವ ಸರ್ವೆ ನಂಬರ್ ನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ.

ದಾವ ಸ್ವತ್ತುಗಳ ನಿಖರವಾದ ಸರ್ವೇ ನಂಬರ್ ಮತ್ತು ವಿಸ್ತೀರ್ಣ ನೆನಪಿಲ್ಲ.ಹಾಗೂ ನಾನು ದಾವದ ಎಲ್ಲಾ ಸ್ವತ್ತುಗಳಲ್ಲೂ ಸ್ವಾಧೀನದಲ್ಲಿದ್ದೇನೆ. ಸರ್ವೆ ನಂಬರ್ 103 ಎಷ್ಟು ಪೋಡುಗಳಾಗಿದೆ ಎಂದು ಗೊತ್ತಿಲ್ಲ.

ನನ್ನ ತಾಯಿ ಬದುಕಿದ್ದಾಗೆ ಅಂದರೆ ದಿನಾಂಕಃ10-7-2004 ರಲ್ಲಿ ನಾನು ಮತ್ತು ನನ್ನ ಸಹೋದರಿಯರು ದಾವ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.ಸಾಕ್ಷಿಯು ಮುಂದುವರೆದು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.ಐಟಂ ನಂಬರ್ 1 ರಿಂದ 5 ರ

ಸ್ವತ್ತುಗಳು ನನ್ನ ಅಕ್ಕ ಶಿವಮ್ಮ ಮತ್ತು ಆಕೆಯ ಮಗ 3 ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ.ಸದರಿ ದಿನಾಂಕದಂದು ಒಟ್ಟು 5 ಪಾಲುಪಟ್ಟಿಯಾಗಿದೆ ಎಂದರೆ ಸರಿಯಲ್ಲ.

ವಿಲ್ ನ ಆದಾರದ ಮೇಲೆ ಹಕ್ಕು ಘೋಷಣೆಗಾಗಿ ದಾವೆಯನ್ನು ಸಲ್ಲಿಸಿದ್ದೇನೆ ಅದರ ನಂಬರ್ ಗೊತ್ತಿಲ್ಲ.ನಿಲಮ್ಮ ನನ್ನ ತಂಗಿ ಎಂದರೆ ಸರಿ.ದಿನೇಶ್‌ರವರು ನನ್ನ ಅಕ್ಕ ಸಾವಿತ್ರಮ್ಮ ಮಗ ಎಂದರೆ ಸರಿ.

ಹೆಬ್ಬಾಳಲು ಗ್ರಾಮದಲ್ಲಿ ನನ್ನ ತಾಯಿ ನಂಜಮ್ಮರವರಿಗೆ ಸರ್ವೆ ನಂಬರ್ 123 ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿ.ಸದರಿ ಸ್ವತ್ತು ನಿಲಮ್ಮ ಮತ್ತು ಸಾವಿತ್ರಮ್ಮನವರ ದಿನೇಶ್ ರವರಿಗೆ ತಲಾ 20 ಗುಂಟೆ ಯಂತೆ ವಿಭಾಗವಾಗಿದೆ ಎಂದರೆ ಸರಿಯಲ್ಲ.ಅದರಂತೆ ದಿನೇಶ ಮತ್ತು ನಿಲಮ್ಮರವರಿಗೆ ಖಾತೆ ಯಾಗಿದೆ ಎಂದರೆ ಸರಿಯಲ್ಲ.

ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ.ಸದರಿ ಸ್ವತ್ತು ದಾವೆ ಸಲ್ಲಿಸುವ ಕಾಲಕ್ಕೆ ಯಾರ ಹೆಸರಿನಲ್ಲಿ ಇತ್ತು ಎಂದು ನೋಡಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ.ದಾವ ಸಲ್ಲಿಸುವ ಕಾಲಕ್ಕೆ ಹೆಬ್ಬಾಳಲು ಗ್ರಾಮದ ಸರ್ವೆ ನಂಬರ್ 123 ರ ವಿಸ್ತೀರ್ಣ 1 ಎಕರೆ ಜಮೀನು ನಿಲಮ್ಮ ಮತ್ತು ದಿನೇಶ್ ರವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ.ಸದರಿಯವರ ಹೆಸರಿನಲ್ಲಿ ಖಾತೆ ಇದ್ದರೂ ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ್ 123 ರ ಜಮೀನು ಇತ್ತಿಚ್ಚೆಗೆ ನನ್ನ ತಾಯಿಯ ಹೆಸರಿನಲ್ಲಿ ಇರಬಹುದು.ನನ್ನ ತಂಗಿ ನಿಲಮ್ಮ ನನ್ನ ವಿರುದ್ಧ ಅಸಲು ದಾವ ನಂಬರ್ 232/2010 ನ್ನು ಸಲ್ಲಿಸಿದ್ದರು ಎಂದರೆ ಸರಿ.ನಾನು ಎ.ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಸರ್ವೆ ನಂಬರ್ ಮತ್ತು ಎಮ್.ಆರ್ ನಂಬರ್ ಗೊತ್ತಿಲ್ಲ.ಸದರಿ ಮೇಲ್ಮನವಿಯಲ್ಲಿ ನಿಲಮ್ಮ ಮತ್ತು ದಿನೇಶರವನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ.ಸದರಿ ಮೇಲ್ಮನವಿಯಲ್ಲಿ ರಾಮೇಗೌಡರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

ನನ್ನ ತಾಯಿ ವಿಲ್ ನ್ನು ದಿನಾಂಕಃ22-11-2004 ರಂದು ಬರೆದಿದ್ದಾರೆ.ಹೆಬ್ಬಾಳಲು ಗ್ರಾಮದ ಸರ್ವೆ ನಂಬರ್ 123 ರಲ್ಲಿ ನನ್ನ ತಾಯಿ ವಿಲ್ ನಲ್ಲಿ ರಂಗಮ್ಮರವರಿಗೆ ತೋರಿಸಿದ್ದು ಅದರ ವಿಸ್ತೀರ್ಣ

ನಿಖರವಾಗಿ ಗೊತ್ತಿಲ್ಲ.ದಾವ ಪತ್ರದಲ್ಲಿ ನೀಡಿರುವ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಯಾರು ಯಾರಿಗೆ ಎಷ್ಟು ಇದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಎ.ಸಿ ನ್ಯಾಯಾಲಯದಲ್ಲಿ ಸುಮಾರು **10** ವರ್ಷಗಳ ಹಿಂದೆ ಮೇಲ್ಮನವಿ ಸಲ್ಲಿಸಿದ್ದೆ.3 ನೇ ಪ್ರತಿವಾದಿ ರಾಮೇಗೌಡರಿಗೆ ದಾವಸ್ವತ್ತು ಯಾವಾಗ ಖಾತೆ ಬದಲಾವಣೆಯಾಗಿದೆ ಎಂದು ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚೆನ್ನಸ್ವಾಮಿ)***

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಚನ್ನರಾಯಪಟ್ಟಣ**